# ಕರ್ನಾಟಕ ಸರ್ಕಾರ

## (ತೋಟಗಾರಿಕೆ ಇಲಾಖೆ)

## ಕರ್ನಾಟಕ ರಾಜ್ಯ ತೋಟಗಾರಿಕೆ ಮಿಷನ್ ಏಜನ್ಸಿ (ರಿ)

**ಸಂಖ್ಯೆ: ಮಿನಿ/ಕರಾತೋಮಿಏ/ವಿನಿ-1/04/2012-13** **ಮಿಷನ್ ನಿರ್ದೇಶಕರ ಕಛೇರಿ**

**ಲಾಲ್‌ಬಾಗ್, ಬೆಂಗಳೂರು**

**ದಿನಾಂಕ:01.06.2013**

## ಪ್ರಕಟಣೆ

**ವಿಷಯ: 2013-14 ನೇ ಸಾಲಿಗೆ ಕರ್ನಾಟಕ ರಾಜ್ಯ ತೋಟಗಾರಿಕೆ ಮಿಷನ್‌ಏಜನ್ಸಿ (ರಿ) ಕಛೇರಿಗೆ ಹೊರಗುತ್ತಿಗೆ ಆಧಾರದ ಮೇಲೆ ಬಾಡಿಗೆ ವಾಹನ ಒದಗಿಸಲು ಟೆಂಡರ್ ಆಹ್ವಾನಿಸುವ ಬಗ್ಗೆ.**

*****

ಈ ಮೂಲಕ ನೋಂದಾಯಿತ ಟ್ರಾವೆಲ್ ಏಜನ್ಸಿಗಳಿಂದ, ಕರ್ನಾಟಕ ರಾಜ್ಯ ತೋಟಗಾರಿಕೆ ಮಿಷನ್ ಏಜನ್ಸಿ (ರಿ),ಲಾಲ್‌ಬಾಗ್, ಬೆಂಗಳೂರು ಕಛೇರಿಯ ಉಪಯೋಗಕ್ಕಾಗಿ ವಿವಿಧ ಮಾದರಿಯ ವಾಹನಗಳನ್ನು **ಹೊರಗುತ್ತಿಗೆ ಆಧಾರದಲ್ಲಿ** ಮಾಸಿಕ ಬಾಡಿಗೆ ಹಾಗೂ ದಿನದ ಬಾಡಿಗೆ ಆಧಾರದ ಮೇಲೆ ಒದಗಿಸಲು ಟೆಂಡರ್ ಕರೆಯಲಾಗಿದೆ.ಭಾಗವಹಿಸಲು ಇಚ್ಛಿಸುವವರು ರೂ.100/- ಗಳನ್ನು ಪಾವತಿಸಿ ಟೆಂಡರ್ ದಾಖಲೆಗಳನ್ನು ದಿನಾಂಕ 06.06.2013 ರಿಂದ KSHMA ಕಛೇರಿಯಲ್ಲಿ ಪಡೆಯಬಹುದಾಗಿದೆ.

ಮುಂದುವರೆದು, ತಾವುಬಾಡಿಗೆ ವಾಹನ ಒದಗಿಸಲು ಇಷ್ಟಪಟ್ಟಲ್ಲಿ ತಾಂತ್ರಿಕ ಬಿಡ್ ಮತ್ತುಆರ್ಥಿಕಬಿಡ್‌ಗಳಂತೆ ಪ್ರತ್ಯೇಕವಾಗಿ ಎರಡು ಲಕೋಟೆ ಪದ್ಧತಿಯಲ್ಲಿ ಈ ಕೆಳಕಂಡ ಷರತ್ತುಗಳ ಮೇರೆಗೆ, ತಮ್ಮ ಅತೀ ಕಡಿಮೆ ದರವನ್ನು ನಮೂದಿಸಿ **ದಿನಾಂಕ: 20.06.2013ರ 4:00**ಗಂಟೆಯೊಳಗಾಗಿ ಮುಚ್ಚಿದ ಲಕೋಟೆಯಲ್ಲಿ KSHMA ಕಛೇರಿಗೆ ಸಲ್ಲಿಸುವುದು. ಹಾಜರಿದ್ದವರ ಸಮ್ಮುಖದಲ್ಲಿ ಮುಚ್ಚಿದ ಲಕೋಟೆಯನ್ನು ದಿನಾಂಕ: 21.06.2013 ರಂದು ತೆರೆದು ತಾಂತ್ರಿಕ ಬಿಡ್ ಪರಿಶೀಲಿಸಿದ ನಂತರ ಅರ್ಹ ಸಂಸ್ಥೆಯವರ ಆರ್ಥಿಕ ಬಿಡ್‌ನ್ನು ತೆರೆಯಲಾಗುವುದು. ಅನುಮೋದಿತ ದರಗಳು ಆದೇಶದ ದಿನಾಂಕದಿಂದ ಒಂದು ವರ್ಷದವರೆಗೆ ಚಾಲ್ತಿಯಲ್ಲಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ KSHMA ಕಛೇರಿಯನ್ನು ಸಂಪರ್ಕಿಸಬಹುದು. ಪ್ರಕಟಣೆಯ ವಿವರಗಳನ್ನು ನಿರ್ದೇಶನಾಲಯದ Website www.hotriculture.kar.nic.in ನಲ್ಲಿ ಪಡೆಯಬಹುದು.

# ಷರತ್ತುಗಳು / ನಿಬಂಧನೆಗಳು

1. ಠೇವಣಿ ಮೊತ್ತ ರೂ.25,000/-ಗಳ DDಯನ್ನು ಮಿಷನ್ ನಿರ್ದೇಶಕರು, ಲಾಲ್‌ಬಾಗ್, ಬೆಂಗಳೂರು ಇವರ ಹೆಸರಿನಲ್ಲಿ ಪಡೆದು ತಾಂತ್ರಿಕ ಬಿಡ್‌ನ ಜೊತೆಗೆ ಲಗತ್ತಿಸಬೇಕು ಇಲ್ಲವಾದಲ್ಲಿಸದರಿ ಟೆಂಡರ್ ಅನ್ನು ತಿರಸ್ಕರಿಸಲಾಗುವುದು.
2. ಗುತ್ತಿಗೆ ಆಧಾರದ ಮೇಲೆ ಒದಗಿಸುವ ವಾಹನವು 2009 ಮತ್ತು ನಂತರದ ನಿರ್ಮಾಣವಾಗಿರುವ (ಮಾಡಲ್) ಆಗಿದ್ದು ದಿನಾಂಕ:01.01.2010 ರ ನಂತರ ನೋಂದಣಿಯಾಗಿರಬೇಕು ವಾಹನಗಳ ಆರ್.ಸಿ. ಪುಸ್ತಕ,ವಿಮೆ/ವಾಹನ ತೆರಿಗೆ, ಹೊಗೆ ನಿಯಂತ್ರಣದ ಮೂಲ ದಾಖಲಾತಿಗಳನ್ನು ಪರಿಶೀಲನೆಗೆಒದಗಿಸತಕ್ಕದ್ದು, ಹಾಗೂ ವಾಹನದ comprehensive ವಿಮೆ ಮತ್ತು ವಾಹನದ ತೆರಿಗೆಯನ್ನುಗುತ್ತಿಗೆದಾರರು ನಿರ್ವಹಿಸತಕ್ಕದ್ದು ವಾಹನಗಳು ಹಳದಿ ನಾಮಫಲಕ ಹೊಂದಿರುವ ವಾಣಿಜ್ಯ ಬಳಕೆಯ ಸುವ್ಯವಸ್ಥಿತವಾಹನಗಳಾಗಿದ್ದು ಚಾಲಕರ ಎಲ್ಲಾ ದಾಖಲಾತಿಗಳು ಚಾಲ್ತಿಯಲ್ಲಿರಬೇಕು
3. ಗುತ್ತಿಗೆ ಆಧಾರದ ಮೇಲೆ ಒದಗಿಸಿರುವ ವಾಹನಗಳು ಕರ್ನಾಟಕ ರಾಜ್ಯಮೋಟಾರ್‌ವೆಹಿಕಲ್ ಕಾಯ್ದೆಯ ನಿಬಂಧನೆಗಳನ್ನು ಮೀರಿದ್ದ ಪಕ್ಷದಲ್ಲಿ ಕಾನೂನಿನ್ವಯ, ಮುಂದಿನ ಕ್ರಮವನ್ನು ಸದರಿ ಸಂಸ್ಥೆಯವರೇಜರುಗಿಸತಕ್ಕದ್ದು.
4. ಮಾಸಿಕಗುತ್ತಿಗೆಆಧಾರದಮೇಲೆ ಒದಗಿಸಲಾದ ವಾಹನಗಳು ನಿಗದಿತಸಮಯಕ್ಕೆ ಒದಗಿಸದೆ ಇದ್ದು ಅಥವಾ ವಾಹನಗಳು ಅವ್ಯವಸ್ಥಿತವಾಗಿದ್ದ ಪಕ್ಷದಲ್ಲಿ ಸೇವೆಯು ತೃಪ್ತಿಕರವಾಗಿಲ್ಲದ್ದ ಪಕ್ಷದಲ್ಲಿ ಹಾಗೂ ವಾಹನಗಳಿಂದ ತೊಂದರೆ ಉಂಟಾಗುವ ಸಂದರ್ಭದಲ್ಲಿಯಾವುದೇ ತಿಳುವಳಿಕೆಯನ್ನು (Notice) ನೀಡದೇ, ಗುತ್ತಿಗೆ ಕರಾರನ್ನು ರದ್ದುಪಡಿಸುವ ಅಧಿಕಾರವು KSHMA ಕಛೇರಿಗೆ ಇರುತ್ತದೆ.
5. ಮಾಸಿಕಗುತ್ತಿಗೆ ಆಧಾರದ ಮೇಲೆ ಪಡೆಯಲಾಗುವ ವಾಹನಗಳು ಎಲ್ಲಾ ಕಛೇರಿಯ ಕೆಲಸದ ದಿವಸಗಳಲ್ಲಿ ಕಡ್ಡಾಯವಾಗಿಹಾಜರಾಗತಕ್ಕದ್ದು. ತಪ್ಪಿದಲ್ಲಿ ಗೈರುಹಾಜರಿ ಎಂದು ಪರಿಗಣಿಸಿ, ಸದರಿ ದಿನದ ಮೊತ್ತವನ್ನು ಬಿಲ್ಲಿನಲ್ಲಿ ಕಟಾಯಿಸುವಷರತ್ತಿಗೆಒಳಪಟ್ಟಿರುತ್ತದೆ.
6. ಮಾಸಿಕಗುತ್ತಿಗೆ ಆಧಾರದ ಮೇಲೆ ಒದಗಿಸಲಾಗುವ ವಾಹನಗಳನ್ನು ಹಾಗೂ ಚಾಲಕರುಗಳನ್ನು ವಿನಾಕಾರಣ ಆಗಿಂದಾಗ್ಗೆ ಬದಲಾಯಿಸದೆ ನಿರಂತರವಾಗಿ ವಾಹನಗಳನ್ನು ಒದಗಿಸುವುದು ಹಾಗೂ ಚಾಲಕರುಗಳನ್ನುಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳತಕ್ಕದ್ದು.
7. ಮಾಸಿಕಗುತ್ತಿಗೆ ಆಧಾರದ ಮೇಲೆ ಒದಗಿಸುವ ವಾಹನಗಳು ಒಂದು ವೇಳೆ ಕೆಟ್ಟುನಿಂತರೆ / ಅಪಘಾತಕ್ಕೀಡಾದ ಪಕ್ಷದಲ್ಲಿ ತ್ವರಿತವಾಗಿ ಕೆಲಸ ಕಾರ್ಯಗಳಿಗೆ ತೊಂದರೆಯುಂಟಾಗದ ರೀತಿಯಲ್ಲಿಒಂದು ಗಂಟೆಯೊಳಗೆ ಬದಲಿ ವಾಹನ ವ್ಯವಸ್ಥೆ ಮಾಡುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳತಕ್ಕದ್ದು.
8. ವಾಹನಗಳುಸರ್ಕಾರಿ ಕಛೇರಿಯ ದಿನನಿತ್ಯದ ಕೆಲಸಗಳಿಗೆ ಬಳಸುವುದರಿಂದ ಹೊರಭಾಗದಲ್ಲಿ, ಯಾವುದೇರೀತಿಯ ಬರವಣಿಗೆಗಳುಹಾಗೂ ಇತರೆಜಾಹೀರಾತುಗಳಿಂದ ಮುಕ್ತವಾಗಿರಬೇಕು.
9. ವಾಹನಗಳುಮಾಹೆಯ ಎಲ್ಲಾ ದಿನಗಳಲ್ಲಿಸಾರ್ವತ್ರಿಕ ರಜೆಗಳು ಸೇರಿ ಲಭ್ಯವಿರಬೇಕು.
10. ವಾಹನಗಳನ್ನುಇಡೀ ರಾಜ್ಯದಲ್ಲಿ ಪ್ರವಾಸಕ್ಕೆ ಒದಗಿಸಲು ಸಿದ್ಧರಿರಬೇಕಾಗಿರುತ್ತದೆ.
11. ಗುತ್ತಿಗೆ ಅವಧಿಯ ದಿನಾಂಕಗುತ್ತಿಗೆ ಕರಾರಿನ ಆದೇಶದ ದಿನಾಂಕದಿಂದ ಒಂದು ವರ್ಷದವರೆಗೆ ಮಾತ್ರಚಾಲ್ತಿಯಲ್ಲಿರುತ್ತದೆ.
12. ವಾಹನ ಚಾಲಕರ ಮತ್ತು ಒಟ್ಟು ವಾಹನದ ನಿರ್ವಹಣೆ ಇತ್ಯಾದಿ ಖರ್ಚುಗಳನ್ನು ವಾಹನದ ಮಾಲಿಕರೇಭರಿಸತಕ್ಕದ್ದು.

13. ವಾಹನ ಸರಬರಾಜುದಾರರಿಗೆ ಯಾವುದೇ ಕಾರಣದಿಂದಾಗಿ ಮುಂಗಡವನ್ನು ಪಾವತಿಸಲಾಗುವುದಿಲ್ಲ.
14. ಮಾಸಿಕಗುತ್ತಿಗೆ ಆಧಾರದ ಮೇಲೆ ಪಡೆಯಲಾಗುವ ವಾಹನಗಳ ಚಾಲಕರುಗಳಿಗೆ ಸಂಬಂಧಪಟ್ಟ ಅಧಿಕಾರಿಯವರು ನೀಡುವ ಆದೇಶವನ್ನು ಪಾಲಿಸಿ, ಕರ್ತವ್ಯ ನಿರ್ವಹಿಸುವಂತೆ ಚಾಲಕರಿಗೆ ಕಟ್ಟುನಿಟ್ಟಾಗಿ ನಿರ್ದೇಶಿಸುವುದು ಚಾಲಕರು ಸಮವಸ್ತ್ರವನ್ನು ಧರಿಸಿ ಕರ್ತವ್ಯಕ್ಕೆ ಹಾಜರಾಗುವುದು ಹಾಗೂ ಪ್ರತಿನಿತ್ಯ ವಾಹನ ಪ್ರಯಾಣಿಸಿದಬಗ್ಗೆ ಲಾಗ್‌ಪುಸ್ತಕದಲ್ಲಿ ಬರೆದು ಸದರಿ ಅಧಿಕಾರಿಯವರಿಂದ ಸಹಿ ಪಡೆದು, ದೃಢೀಕರಿಸಿಕೊಳ್ಳತಕ್ಕದ್ದು.
15. ಮಾಸಿಕ ಗುತ್ತಿಗೆ ಆಧಾರದ ಮೇಲೆ ಒದಗಿಸಲಾಗಿರುವ ವಾಹನಗಳ ಬಿಲ್‌ಗಳನ್ನು ಸೇವಾಶುಲ್ಕ ಸೇರಿಸಿ ಸಿದ್ಧಪಡಿಸಿ ಸಂಬಂಧಪಟ್ಟಅಧಿಕಾರಿಯವರಿಂದ ದೃಢೀಕರಿಸಿಕೊಂಡು ಪ್ರತಿ ಮಾಹೆ ಅಂತ್ಯಗೊಂಡ ನಂತರ ಮುಂದಿನತಿಂಗಳ ದಿನಾಂಕ : 5 ರೊಳಗಾಗಿ ಬಿಲ್‌ನ್ನು (ಸೇವಾ ಶುಲ್ಕವನ್ನು ಬಿಲ್ಲಿನಲ್ಲಿ ಸೇರಿಸಿ) ಹಣ ಪಾವತಿಗಾಗಿ KSHMAಕಛೇರಿಗೆ ನೀಡುವುದು.ಪಾವತಿಸಬೇಕಾದ ಹಣವನ್ನು ಆದಾಯ ತೆರಿಗೆಯನ್ನು ಕಟಾಯಿಸಿಚೆಕ್ ಮೂಲಕ ಪಾವತಿಸಲಾಗುವುದು.
16. ಕಛೇರಿಗೆ ಅಗತ್ಯವಿರುವ ದಿನಗಳಲ್ಲಿ ಮಾತ್ರ ದಿನದ ಬಾಡಿಗೆ ಆಧಾರದ ಮೇಲೆ ಬೆಂಗಳೂರಿನ ಒಳ ಹಾಗೂ ಹೊರ ಬಾಗಗಳಲ್ಲಿಪ್ರಯಾಣಿಸಲು ವಾಹನ ಒದಗಿಸಬೇಕು.
17. ಕಛೇರಿಗೆ ಭಾರತ ಸರ್ಕಾರದಿಂದ ಗಣ್ಯವ್ಯಕ್ತಿಗಳು, ಇತರೆ ಅದಿಕಾರಿಗಳು ಆಗಮಿಸಿದಾಗ ಬೆಂಗಳೂರಿನಲ್ಲಿ ಅಥವಹೊರಭಾಗದಲ್ಲಿ2 ರಿಂದ ಆಧಿಕ ದಿನಗಳ ಕಾಲ ಪ್ರಯಾಣಿಸಲು ವ್ಯವಸ್ಥಿತA/C/ NonA/Cಗಳನ್ನು ಒದಗಿಸುವುದು.
18. ದಿನದ ಬಾಡಿಗೆ ಆಧಾರದ ಮೇಲೆ ಒದಗಿಸುವ ವಾಹನಗಳಿಗೆ ಅಗತ್ಯವಿದ್ದಸಮಯದಲ್ಲಿ ಮಾತ್ರ ಬೇಡಿಕೆ ಇಡಲಾಗುವುದು ಮತ್ತು ಬೇಡಿಕೆಗೆ ಅನುಗುಣವಾಗಿ ವಾಹನಗಳನ್ನು ಒದಗಿಸಲು ಸಿದ್ದರಿರಬೇಕು.
19. ದಿನದ ಬಾಡಿಗೆ ಆಧಾರದ ಮೇಲೆ ಒದಗಿಸುವ ವಾಹನಗಳಲ್ಲಿ ಪ್ರಯಾಣಿಸುವ ಅಧಿಕಾರಿಗಳಿಂದ ಧೃಡೀಕರಿಸಿಮರುದಿನದೊಳಗೆ ಪಾವತಿಗಾಗಿ ಕಛೇರಿಗೆ ಬಿಲ್ಲನ್ನು ಸಲ್ಲಿಸುವುದು.
20. ಟೆಂಡರ್‌ನಲ್ಲಿ ಅನುಮೋದನೆಯಾದ ದರಗಳನ್ನು ಯಾವುದೇ ಕಾರಣಕ್ಕೂ ಕರಾರಿನ ಅವಧಿಯಲ್ಲಿ ಹೆಚ್ಚಿಸಲಾಗುವುದಿಲ್ಲ.
21. ವಾಹನಗಳನ್ನು ನಿಗದಿತ ದಿನಾಂಕ/ವೇಳೆಗೆ ಕಳುಹಿಸದಿದ್ದಲ್ಲಿ ದಿನಕ್ಕೆ ರೂ. 1000/- ದಂಡವನ್ನು ವಿಧಿಸಲಾಗುವುದು.
22. ಸರಬರಾಜುದಾರರು ಹಿಂದಿನ ಮೂರು ವರ್ಷಗಳಲ್ಲಿ ನೀಡಿರುವ ಪ್ರಮುಖ ಗುತ್ತಿಗೆಗಳಿಗೆ ಸಂಬಂದಿಸಿದಂತೆ ಸಂಸ್ಥೆಗಳಿಂದ ಪಡೆದ ಪ್ರಮಾಣಪತ್ರ ತಾಂತ್ರಿಕ ಬಿಡ್‌ನೊಂದಿಗೆ ಲಗತ್ತಿಸಬೇಕು.
23. ನಿಯಮಾನುಸಾರ ಬಿಲ್ಲಿನಲ್ಲಿ ತೆರಿಗೆಯನ್ನು ಕಟಾಯಿಸಲಾಗುವುದು.
24. E.M.D ಹಣಕ್ಕೆ ಯಾವುದೇ ವಿಧವಾದ ಬಡ್ಡಿಯನ್ನು ನೀಡಲಾಗುವುದಿಲ್ಲ ಮತ್ತು ಕರಾರು ಅವಧಿ ಮುಗಿದನಂತರ ಹಿಂತಿರುಗಿಸಲಾಗುವುದು.ಟೆಂಡರ್‌ನಲ್ಲಿ ವಿಧಿಸಿರುವ ಷರತ್ತುಗಳನ್ನು ಉಲ್ಲಂಗಿಸಿದಲ್ಲಿE.M.Dಮೊತ್ತವನ್ನು ಸರ್ಕಾರಕ್ಕೆಮುಟ್ಟುಗೋಲು ಹಾಕಿಕೊಳ್ಳಲಾಗುವುದು.
25. ಯಶಸ್ವಿ ಟೆಂಡರ್‌ದಾರರು ಈ ಎಲ್ಲಾ ಷರತ್ತುಗಳಿಗೊಳಪಟ್ಟ ಕರಾರು ಪತ್ರವನ್ನು ರೂ. 100=00 ಛಾಪಾ ಕಾಗದದಲ್ಲಿ ಬರೆದುಕೊಡಬೇಕು.
26. ಟೆಂಡರ್‌ದಾರರು ಬೆಂಗಳೂರಿನಲ್ಲಿ ತಮ್ಮ ಆಡಳಿತ ಕಛೇರಿ ಹೊಂದಿರಬೇಕು.
27. ಮೇಲಿನ ಷರತ್ತು ನಿಂಬಧನೆಗಳನ್ನು ಉಲ್ಲಂಘಿಸಿದಲ್ಲಿ ಠೇವಣಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಹಾಗೂ ಟೆಂಡರ್ ಕರಾರನ್ನು ರದ್ದು ಪಡಿಸಲಾಗುವುದು.

28. ಸದರಿ ಟೆಂಡರನ್ನು ಅಂಗೀಕರಿಸುವ ಮತ್ತುತಿರಸ್ಕರಿಸುವ ಅಧಿಕಾರ ಮಿಷನ್ ನಿರ್ದೇಶಕರು/ ತೋಟಗಾರಿಕೆ ನಿರ್ದೇಶಕರ/ ಕೆಳಸಹಿದಾರರಿಗೆ ಇರುತ್ತದೆ.
29. ಸಂಸ್ಥೆ ನೊಂದಾಯಿತ ಆಗಿರುವ ಬಗ್ಗೆ Firm Registration ದಾಖಲೆಯ ಮತ್ತು Service Tax Registration ದಾಖಲೆಯ ಪ್ರತಿಗಳನ್ನು ಲಗತ್ತಿಸಬೇಕು.

**ಕಾರ್ಯನಿರ್ವಾಹಕ ನಿರ್ದೇಶಕರು**

**ANNEXURE-I**
**TechnicalBid**

**Tender Details:**

| | | |
|---|---|---|
| 1 | Name and addressof the Travel Agency<br>Phone No.:<br>E-Mail Address: | |
| 2 | Date and Registration No. of Travel Agency | |
| 3 | Details of Approval /Registration obtained from the Department of Tourism and /or other Govt. agencies. | |
| 4 | TIN /PAN/ServiceRegistration Details (Attested Xerox copies to the enclosed) | |
| 5 | Details of the Various models of the vehicles operated by the Agency (Furnish only details for the vehicles registered after 01.01.2010) | |
| 6 | Additional detailsfurnish certificates from firms/officers if vehicles are provided in the last 3 years | |
| 7 | Details of E.M.D. Amount<br>DD No.:<br>Amt.:<br>Date of purchase:<br>Bank where purchased: | |
| 8 | Please specify whether it is a proprietaryconcern or a partnership firm or a limited company. Furnish details with name and address | |
| 9 | Furnish details ofIT Returns for the last 3 years 2009-10, 2010-2011 and 2011-12 (enclose attested Xerox copies) | |

Date:

**Signature of Tenderer**

## ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆ ಕಛೇರಿಗೆ ಬಾಡಿಗೆ ವಾಹನ ವ್ಯವಸ್ಥೆಗೆ

## ದರಪಟ್ಟಿ ನೀಡುವ ವಿವರಗಳು- ANNEXURE-2

# Financial bid

| Sl. No | Vehicle Model | Rates within Bangalore | | | | | | Rates for Outside Bangalore | |
|---|---|---|---|---|---|---|---|---|---|
| | | 4 hrs/40 km | 8 hrs 80 km | 12 hrs 100 km | For extra Km | For extra hrs | Monthly rate min 25 days & 300 hrs 2500 km | Rate per km | Bata per day |
| 1. | Toyota Innova– with AC | | | | | | | | |
| 2. | Ford Ikon – with AC | | | | | | | | |
| 3. | TATA Indigo – with AC | | | | | | | | |
| 4. | TATA Indigo -Non-AC | | | | | | | | |
| 5. | TATA Manza – with AC | | | | | | | | |
| 6. | TATA Manza -Non-AC | | | | | | | | |
| 7. | Toyota Etios– with AC | | | | | | | | |

| | | | | | | | | | |
|---|---|---|---|---|---|---|---|---|---|
| 8. | Toyota EtiosNon – with AC | | | | | | | | |
| 9. | Maruthi SX4 – with AC | | | | | | | | |
| 10. | Maruthi SX4 Non – with AC | | | | | | | | |
| 11. | TATA Indicab – with AC | | | | | | | | |
| 12. | TATA Indicab -Non-AC | | | | | | | | |
| 13. | TATA Sumo – with AC | | | | | | | | |
| 14. | TATA Sumo Non – with AC | | | | | | | | |
| 15. | Toyota Qualis – with AC | | | | | | | | |
| 16. | Toyota Qualis -Non-AC | | | | | | | | |

Date:

Place :

**Signature**